**ಪ್ರಸಾರವಾದ ಮತ್ತು ವಿತರಿಸಲಾದ ಶುಕ್ರವಾರದ ಪ್ರವಚನ (ಖುತ್ಬಾ)**

**ದಿನಾಂಕ: 15 ರಬೀಉಲ್ ಅವ್ವಲ್ 1448 ಹಿಜ್ರಿ / 28 ಆಗಸ್ಟ್ 2026**

# ವಿಷಯ: ದೈವಿಕ ಅನುಗ್ರಹಗಳ ಸಂರಕ್ಷಣೆ

## ಮೊದಲನೇ ಪ್ರವಚನ:

**ಎಲ್ಲ ಪ್ರಶಂಸೆಗಳೂ ಅಲ್ಲಾಹನಿಗೆ ಮಾತ್ರ ಸಲ್ಲುತಕ್ಕದ್ದು. ನಾವು ಅವನನ್ನೇ ಸ್ತುತಿಸುತ್ತೇವೆ, ಅವನಲ್ಲೇ ಸಹಾಯವನ್ನು ಹಾಗೂ ಕ್ಷಮೆಯನ್ನು ಯಾಚಿಸುತ್ತೇವೆ. ನಮ್ಮ ಆತ್ಮಗಳ ಕೆಡುಕುಗಳಿಂದ ಮತ್ತು ದುಷ್ಕೃತ್ಯಗಳಿಂದ ಅಲ್ಲಾಹನಲ್ಲಿ ರಕ್ಷಣೆ ಬೇಡುತ್ತೇವೆ. ಅಲ್ಲಾಹನು ಯಾರಿಗೆ ಸನ್ಮಾರ್ಗ ತೋರುತ್ತಾನೋ ಅವನನ್ನು ದಾರಿ ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ; ಮತ್ತು ಯಾರನ್ನು ದಾರಿ ತಪ್ಪಿಸುತ್ತಾನೋ ಅವನಿಗೆ ಸನ್ಮಾರ್ಗ ತೋರಲು ಯಾರಿಂದಲೂ ಸಾಧ್ಯವಿಲ್ಲ. ಅಲ್ಲಾಹನನ್ನು ಹೊರತುಪಡಿಸಿ ಆರಾಧನೆಗೆ ಅರ್ಹನಾದವನು ಬೇರಾರೂ ಇಲ್ಲ, ಅವನು ಏಕನು, ಅವನಿಗೆ ಯಾವುದೇ ಪಾಲುದಾರರಿಲ್ಲ ಎಂದೂ ಮುಹಮ್ಮದ್ ﷺ ಅವರು ಅಲ್ಲಾಹನ ದಾಸ ಮತ್ತು ಪ್ರವಾದಿಯಾಗಿದ್ದಾರೆ ಎಂದೂ ನಾನು ಸಾಕ್ಷಿ ಹೇಳುತ್ತೇನೆ. ಅವರು ಆತನ ಸಮಸ್ತ ಸೃಷ್ಟಿಗಳಲ್ಲಿ ಅತಿ ಶ್ರೇಷ್ಠರೂ ಅತ್ಯಂತ ಪ್ರಿಯರೂ ಆಗಿದ್ದಾರೆ. ಅವರು ನೀಡಲಾದ ಅಮಾನತ್ತನ್ನು ಅತ್ಯಂತ ಪ್ರಾಮಾಣಿಕತೆಯಿಂದ ತಲುಪಿಸಿದರು, ಪ್ರವಾದಿತ್ವದ ಸಂದೇಶವನ್ನು ಪ್ರಸರಿಸಿದರು, ಮತ್ತು ದೈವಿಕ ಮಾರ್ಗದಲ್ಲಿ ಅಂತಿಮ ಉಸಿರಿರುವವರೆಗೆ ಸತ್ಯದ ಪರವಾಗಿ ಸತತ ಹೋರಾಟ ನಡೆಸಿದರು. ಅಲ್ಲಾಹನು ಅವರ ಮೇಲೆಯೂ, ಅವರ ಪರಿವಾರದವರ ಮೇಲೆಯೂ ಮತ್ತು ಸಹಚರರ (ಸಹಾಬಿಗಳ) ಮೇಲೆಯೂ ಅನಂತ ಶುಭ ಹಾರೈಕೆ ಹಾಗೂ ಶಾಂತಿಯನ್ನು ಸುರಿಸಲಿ.**

**"ಓ ಸತ್ಯವಿಶ್ವಾಸಿಗಳೇ, ನೀವು ಅಲ್ಲಾಹನಿಗೆ ಅಂಜಬೇಕಾದ ರೀತಿಯಲ್ಲಿ ಅಂಜಿರಿ ಮತ್ತು ಮುಸ್ಲಿಮರಾಗದ ಹೊರತು ಮರಣ ಹೊಂದಬೇಡಿರಿ." [ಕುರ್‌ಆನ್ - ಆಲ್ ಇಮ್ರಾನ್: 102]**

ಅತ್ಯಂತ ಸತ್ಯವಾದ ಮಾತು ಅಲ್ಲಾಹನ ಗ್ರಂಥ (ಕುರ್‌ಆನ್) ಆಗಿದೆ ಮತ್ತು ಶ್ರೇಷ್ಠವಾದ ಮಾರ್ಗದರ್ಶನ ಮುಹಮ್ಮದ್ ﷺ ಅವರ ಮಾರ್ಗದರ್ಶನವಾಗಿದೆ. ಧರ್ಮದಲ್ಲಿ ಹೊಸದಾಗಿ ಸೇರಿಸಲಾದ ಪ್ರತಿಯೊಂದು ವಿಷಯವೂ ಕೆಡುಕಾಗಿದೆ, ಅಂತಹ ಪ್ರತಿಯೊಂದು ನವೀನತೆಯೂ ಅಧರ್ಮದ ಬಿದ್ ಅತ್ ಅಥವಾ ನವೀನಾಚಾರವಾಗಿದೆ, ಪ್ರತಿಯೊಂದು ಬಿದ್ ಅತ್ ದಾರಿಗೇಡಿತನವಾಗಿದೆ ಮತ್ತು ಪ್ರತಿಯೊಂದು ದಾರಿಗೇಡಿತನದ ಅಂತ್ಯ ನರಕವಾಗಿದೆ.

ಅಲ್ಲಾಹನ ದಾಸರೇ: ನಮ್ಮ ಮೇಲಿರುವ ಅಲ್ಲಾಹನ ಅನುಗ್ರಹಗಳು ಅಸಂಖ್ಯಾತ ಹಾಗೂ ಅಪಾರ. ಆತನು ನಮಗೆ ನೀಡಿದ ಒಳಿತುಗಳು ಎಷ್ಟೋ, ಆತ ತೋರುವ ಕರುಣೆಗಳೆಷ್ಟೋ! ಎಷ್ಟೋ ವಿಪತ್ತುಗಳಿಂದ ಆತ ನಮ್ಮನ್ನು ಕಾಪಾಡಿದ್ದಾನೆ, ಎಷ್ಟೋ ಸಂಕಟಗಳನ್ನು ನಮ್ಮಿಂದ ದೂರಗೊಳಿಸಿದ್ದಾನೆ. ಅಲ್ಲಾಹನು ಹೇಳುತ್ತಾನೆ:

"ಮತ್ತು ನೀವು ಕೇಳಿದ್ದನ್ನೆಲ್ಲವನ್ನೂ ಆತನು ನಿಮಗೆ ನೀಡಿದ್ದಾನೆ. ಅಲ್ಲಾಹನ ಅನುಗ್ರಹಗಳನ್ನು ನೀವು ಎಣಿಸತೊಡಗಿದರೆ ಅವುಗಳನ್ನು ಲೆಕ್ಕಹಾಕುವುದೇ ನಿಮಗೆ ಸಾಧ್ಯವಾಗದು. ನಿಜವಾಗಿಯೂ ಮಾನವನು ಅತ್ಯಂತ ಅಕ್ರಮಿ ಮತ್ತು ಕೃತಘ್ನನಾಗಿದ್ದಾನೆ." [ಕುರ್‌ಆನ್ - ಇಬ್ರಾಹಿಂ: 34]

ಮಾನವನ ದೌರ್ಬಲ್ಯವೆಂದರೆ, ಅನುಗ್ರಹವು ತನ್ನ ಕೈತಪ್ಪಿ ಹೋದಾಗಷ್ಟೇ ಆತನಿಗೆ ಅದರ ಮೌಲ್ಯದ ಅರಿವಾಗುತ್ತದೆ. ಅದು ಸಂಪೂರ್ಣವಾಗಿ ಇಲ್ಲವಾದಾಗಲೇ ಅದರ ಘನತೆ ಆತನಿಗೆ ತಿಳಿಯುತ್ತದೆ. ಈಮಾನ್ ಅಥವಾ ಸತ್ಯಡಾ ಮೇಲಿನ ವಿಶ್ವಾಸ ಮತ್ತು ಶಾಂತಿ ಮತ್ತು ನೆಮ್ಮದಿಗಳು ಅಲ್ಲಾಹನ ಅನುಗ್ರಹಗಳು; ಆರೋಗ್ಯ ಮತ್ತು ಕುಟುಂಬವೂ ಅವನ ಅನುಗ್ರಹ; ನೀರು ಮತ್ತು ವಿದ್ಯುತ್ ಕೂಡ ಅವನದೇ ಅನುಗ್ರಹಗಳು; ಅಷ್ಟೇಕೆ, ನಿಮ್ಮ ಎದೆಯಲ್ಲಿ ಉಸಿರಾಡುವ ಪ್ರತಿಯೊಂದು ಉಸಿರೂ ಸರ್ವಶಕ್ತ ಅಲ್ಲಾಹನ ಮಹಾನ್ ಅನುಗ್ರಹವಾಗಿದೆ.

ಓ ಸತ್ಯವಿಶ್ವಾಸಿಗಳೇ: ಇಸ್ಲಾಮೀ ಶರೀಯತ್ ದೈವಿಕ ಅನುಗ್ರಹಗಳನ್ನು ಕಾಪಾಡಿಕೊಳ್ಳಲು ಕುರ್‌ಆನ್ ಮತ್ತು ಸುನ್ನತುಗಳಲ್ಲಿ ಕೆಲವು ಮಾರ್ಗಗಳನ್ನು ಸೂಚಿಸಿವೆ.

ಅವುಗಳಲ್ಲಿ ಮೊದಲನೆಯದು: ಪಾಪ ಕೃತ್ಯಗಳಿಂದ ದೂರವಿರುವುದು. ಏಕೆಂದರೆ ಪಾಪಗಳು ಅನುಗ್ರಹಗಳು ನಾಶವಾಗಲು ಪ್ರಮುಖ ಕಾರಣಗಳಾಗಿವೆ. ಅಲ್ಲಾಹನು ಹೇಳುತ್ತಾನೆ:

"ಜನರು ಸ್ವತಃ ತಮ್ಮ ಮನಸ್ಥಿತಿಯನ್ನು ಬದಲಾಯಿಸಿಕೊಳ್ಳುವವರೆಗೆ, ಅಲ್ಲಾಹನು ಅವರಿಗೆ ನೀಡಿದ ಅನುಗ್ರಹವನ್ನು ಎಂದಿಗೂ ಬದಲಾಯಿಸುವುದಿಲ್ಲ. ನಿಶ್ಚಯವಾಗಿಯೂ ಅಲ್ಲಾಹನು ಎಲ್ಲವನ್ನೂ ಆಲಿಸುವವನೂ ಬಲ್ಲವನೂ ಆಗಿದ್ದಾನೆ." [ಕುರ್‌ಆನ್, ಅಲ್-ಅನ್ಫಾಲ್: 53]

ಜುಬೈರ್ ಬಿನ್ ನುಫೈರ್ (ರ) ಅವರು ವರದಿ ಮಾಡುತ್ತಾರೆ: ಸೈಪ್ರಸ್ ಗೆಲ್ಲಲ್ಪಟ್ಟಾಗ, ಅಲ್ಲಿದ್ದ ಜನರನ್ನು ಬೇರ್ಪಡಿಸಲಾಯಿತು. ಅವರು ಪರಸ್ಪರರನ್ನು ನೋಡಿ ಅಳುತ್ತಿದ್ದರು. ಆಗ ಸಹಾಬಿ ಅಬು ದರ್ದಾ(ರ) ಅವರು ಏಕಾಂಗಿಯಾಗಿ ಕುಳಿತು ಅಳುತ್ತಿರುವುದನ್ನು ಕಂಡು ನಾನು, "ಓ ಅಬೂ ದರ್ದಾ, ಇಸ್ಲಾಂ ಮತ್ತು ಮುಸ್ಲಿಮರಿಗೆ ಅಲ್ಲಾಹನು ಘನತೆ ತಂದಿತ್ತ ಈ ಶುಭ ದಿನದಂದು ನೀವೇಕೆ ಅಳುತ್ತಿದ್ದೀರಿ!?" ಎಂದು ಕೇಳಿದೆ. ಅದಕ್ಕೆ ಅವರು, "ಅಯ್ಯೋ ಜುಬೈರ್! ಜನತೆಯು ಅಲ್ಲಾಹನ ಆಜ್ಞೆಯನ್ನು ಉಲ್ಲಂಘಿಸಿದಾಗ ಆತನ ದೃಷ್ಟಿಯಲ್ಲಿ ಎಷ್ಟು ಅಲ್ಪರಾಗಿಬಿಡುತ್ತಾರೆ ನೋಡು! ಒಂದಾನೊಂದು ಕಾಲದಲ್ಲಿ ಬಲಶಾಲಿಯೂ, ವಿಜಯಿಯೂ, ರಾಜ್ಯಾಧಿಕಾರ ಉಳ್ಳವರಾಗಿದ್ದರು ಇವರು.. ಈಗ ನೋಡಿ ಈ ನಾಡು ಅಲ್ಲಾಹನ ಆಜ್ಞೆಯನ್ನು ತೊರೆದಾಗ ಇಂತಹ ಶೋಚನೀಯ ಸ್ಥಿತಿಗೆ ತಲುಪಿದೆ." ಎಂದರು.

ಅಲಿ ಬಿನ್ ಅಬಿ ತಾಲಿಬ್ (ರ) ಹೇಳುತ್ತಾರೆ: "ವಿಪತ್ತು ಯಾವುದೇ ಇದ್ದರೂ ಪಾಪದ ಕಾರಣದಿಂದಲೇ ಬರುತ್ತದೆ, ಮತ್ತು ತೌಬಾ ಅಥವಾ ಪಶ್ಚಾತ್ತಾಪವೇ ಅದನ್ನು ದೂರಮಾಡುತ್ತಡವ." ಇಮಾಮ್ ಇಬ್ನುಲ್-ಖಯ್ಯಿಮ್ (ರ) ಹೇಳುತ್ತಾರೆ: "ಪಾಪಗಳ ಶಿಕ್ಷೆಯೆಂದರೆ ಅನುಗ್ರಹಗಳ ನಿರ್ಗಮನ ಮತ್ತು ಸಂಕಟಗಳ ಆಗಮನ." ಎಷ್ಟೋ ಜನರು ಸಮೃದ್ಧಿ ಮತ್ತು ಸುಖ-ಸಂತೋಷಗಳಲ್ಲಿ ಬಾಳುತ್ತಿದ್ದರು; ಆದರೆ ಅವರು ವಿಧೇಯತೆಯನ್ನು ಅನಾದರವಾಗಿಯೂ, ಶಾಂತಿಯನ್ನು ಅಶಾಂತಿಯಾಗಿಯೂ ಬದಲಾಯಿಸಿಕೊಂಡಾಗ ಅವರ ಸ್ಥಿತಿ ಗತಿಗಳು ಹದಗೆಟ್ಟು ಹೋದವು.

ನೆನಪಿಡಿ:

> ನಿಮ್ಮ ಬಳಿ ಅನುಗ್ರಹವಿದ್ದರೆ ಅದನ್ನು ಜತನದಿಂದ ಕಾಯ್ದುಕೊಳ್ಳಿ.

> ಏಕೆಂದರೆ ಪಾಪಕೃತ್ಯಗಳು ಅನುಗ್ರಹಗಳನ್ನು ಕಸಿದುಕೊಳ್ಳುತ್ತವೆ.

> ದೇವನ ವಿಧೇಯತೆ ತೋರುವ ಮೂಲಕವೇ ಅದನ್ನು ಸುರಕ್ಷಿತವಾಗಿಡಿ,

> ನಿಜವಾಗಿಯೂ ದೇವನು ಶಿಕ್ಷಿಸುವುದರಲ್ಲಿ ಅತ್ಯಂತ ಶೀಘ್ರಕೋಪಿಯಾಗಿದ್ದಾನೆ.

ಮತ್ತೊಂದು ಕಾರಣ: ಅಲ್ಲಾಹನಿಗೆ ಕೃತಜ್ಞತೆ (ಶುಕ್ರ್) ಸಲ್ಲಿಸುವುದು.ಕೃತಜ್ಞತೆಯು ಅನುಗ್ರಹಗಳನ್ನು ಉಳಿಸುತ್ತದೆ ಮತ್ತು ವಿಪತ್ತುಗಳನ್ನು ತಡೆಯುತ್ತದೆ. ಅಲ್ಲಾಹನು ಹೇಳುತ್ತಾನೆ:

"ಮತ್ತು ನಿಮ್ಮ ರಕ್ಷಕನು ಹೀಗೆ ಸಾರಿದನು: 'ನೀವು ಕೃತಜ್ಞತೆ ಸಲ್ಲಿಸಿದರೆ ನಾನು ನಿಮಗೆ ಖಂಡಿತವಾಗಿಯೂ ಹೆಚ್ಚಿಸಿಕೊಡುವೆನು, ಆದರೆ ನೀವು ಕೃತಘ್ನರಾದರೆ ನಿಶ್ಚಯವಾಗಿಯೂ ನನ್ನ ಶಿಕ್ಷೆಯು ಅತ್ಯಂತ ಕಠಿಣವಾಗಿರುತ್ತದೆ." [ಕುರ್‌ಆನ್ - ಇಬ್ರಾಹಿಂ: 7]

ಉಮರ್ ಬಿನ್ ಅಬ್ದುಲ್ ಅಝೀಝ್ (ರ) ಹೇಳುತ್ತಿದ್ದರು: "ಅಲ್ಲಾಹನ ಅನುಗ್ರಹಗಳನ್ನು ಕೃತಜ್ಞತೆಯೆಂಬ ಸಂಕೋಲೆಯಿಂದ ಬಂಧಿಸಿಡಿ." ನಮ್ಮ ಪೂರ್ವಜರು ಹೇಳುತ್ತಿದ್ದರು: "ಕೃತಜ್ಞತೆಯು ಕೈಯಲ್ಲಿದ್ದ ಅನುಗ್ರಹಕ್ಕೆ ರಕ್ಷಣೆಯಾಗಿದ್ದರೆ ಕೈತಪ್ಪಿದ್ದನ್ನು ಪಡೆಯಲು ಬಲೆಯಾಗಿದೆ." ಕೃತಜ್ಞತೆಯೆಂದರೆ ಕೇವಲ ನಾಲಿಗೆಯ ಮಾತಲ್ಲ; ಮನಸ್ಸಿನಿಂದ ಒಪ್ಪಿಕೊಳ್ಳುವುದು, ನಾಲಿಗೆಯಿಂದ ಸ್ತುತಿಸುವುದು ಮತ್ತು ಆ ಅನುಗ್ರಹವನ್ನು ಅಲ್ಲಾಹನಿಗೆ ಇಷ್ಟವಾಗುವ ಕಾರ್ಯಗಳಲ್ಲಿ ಬಳಸುವುದು. ಅಲ್ಲಾಹನು ಹೇಳುತ್ತಾನೆ:

"ಓ ದಾವೂದರ ಸಂತತಿಗಳೇ, ಕೃತಜ್ಞತೆಯಿಂದ ಸತ್ಕರ್ಮಗಳನ್ನು ಮಾಡಿರಿ." [ಕುರ್‌ಆನ್ - ಸಬಾ: 13]

ಓ ಪುಣ್ಯವಂತ ಸಜ್ಜನರೇ:

ಅನುಗ್ರಹಗಳನ್ನು ರಕ್ಷಿಸುವ ಮತ್ತೊಂದು ಪ್ರಮುಖ ಮಾರ್ಗವೆಂದರೆ: ಮಿತವಾಗಿ ಬಳಸುವುದು ಹಾಗೂ ಇಸ್ರಾಫ್ ಅಥವಾ ಅತಿಯಾದ ಪೋಲು ಮಾಡುವುದನ್ನು ತ್ಯಜಿಸುವುದು. ಅಲ್ಲಾಹನು ಹೇಳುತ್ತಾನೆ:

"ಓ ಮಾನವ ಸಂತತಿಗಳೇ, ಪ್ರತಿಯೊಂದು ಪ್ರಾರ್ಥನಾ ಸ್ಥಳದಲ್ಲೂ ನಿಮ್ಮ ಅಲಂಕಾರವನ್ನು ಧರಿಸಿರಿ; ತಿನ್ನಿರಿ ಮತ್ತು ಕುಡಿಯಿರಿ, ಆದರೆ ಪೋಲು ಮಾಡಬೇಡಿರಿ. ನಿಶ್ಚಯವಾಗಿಯೂ ಆತನು ಪೋಲು ಮಾಡುವವರನ್ನು ಪ್ರೀತಿಸುವುದಿಲ್ಲ." [ಕುರ್‌ಆನ್, ಅಲ್-ಅಅರಾಫ್: 31]

ಮತ್ತು ಅಲ್ಲಾಹನು ಹೇಳುತ್ತಾನೆ: "ಬಂಧುಗಳಿಗೆ, ಬಡವರಿಗೆ ಮತ್ತು ಹಾದಿಹೋಕರಿಗೆ ಅವರ ಹಕ್ಕನ್ನು ನೀಡಿರಿ, ಮತ್ತು ಯಾವುದೇ ಕಾರಣಕ್ಕೂ ಆಸ್ತಿಯನ್ನು ಪೋಲು ಮಾಡಬೇಡಿರಿ. ನಿಶ್ಚಯವಾಗಿಯೂ ಪೋಲು ಮಾಡುವವರು ಶೈತಾನನ ಸಹೋದರರಾಗಿದ್ದಾರೆ." [ಕುರ್‌ಆನ್, ಅಲ್-ಇಸ್ರಾ: 26, 27]

ಇಂದು ಎಷ್ಟು ನೀರು ಪೋಲಾಗುತ್ತಿದೆ! ಅಗತ್ಯವಿಲ್ಲದಿದ್ದರೂ ಎಷ್ಟು ದೀಪಗಳು ಉರಿಯುತ್ತಿವೆ! ಎಷ್ಟೋ ಆಹಾರ ಪದಾರ್ಥಗಳು ಕಸದ ಬುಟ್ಟಿಗೆ ಎಸೆಯಲ್ಪಡುತ್ತಿವೆ! ಇವುಗಳ ಬಗ್ಗೆ ನಾಳೆ ಪ್ರಶ್ನಿಸಲಾಗುತ್ತದೆ ಎಂಬ ಅರಿವು ಜನರಲ್ಲಿದ್ದರೆ, ಅವರು ಇವುಗಳನ್ನು ಅತ್ಯಂತ ಜಾಗರೂಕತೆಯಿಂದ ಬಳಸುತ್ತಿದ್ದರು. ಅಲ್ಲಾಹನು ಹೇಳುತ್ತಾನೆ:

"ನಂತರ ಆ ದಿನ ನಿಮ್ಮ ಬಳಿಯಿದ್ದ ಅನುಗ್ರಹಗಳ ಕುರಿತು ಖಂಡಿತವಾಗಿಯೂ ವಿಚಾರಿಸಲಾಗುವುದು." [ಕುರ್‌ಆನ್ - ಅತ್ತಕಾಸುರ್: 8]

ಪ್ರವಾದಿ ﷺ ಅವರು ಹೇಳಿದ್ದಾರೆ: "ಅಂತಿಮ ತೀರ್ಪಿನ ದಿನದಂದು, ಯಾವುದೇ ದಾಸನು ತನ್ನ ಆಯುಷ್ಯವನ್ನು ಯಾವುದರಲ್ಲಿ ಕಳೆದನು, ತನ್ನ ಜ್ಞಾನವನ್ನು ಹೇಗೆ ಬಳಸಿದನು, ತನ್ನ ಸಂಪತ್ತನ್ನು ಹೇಗೆ ಗಳಿಸಿದನು ಮತ್ತು ಯಾವುದರಲ್ಲಿ ವೆಚ್ಚ ಮಾಡಿದನು, ಹಾಗೂ ತನ್ನ ದೇಹವನ್ನು ಯಾವುದಕ್ಕಾಗಿ ಸವೆಸಿದನು ಎಂಬ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸುವವರೆಗೆ ಆತನ ಪಾದಗಳು ಜಾಗದಿಂದ ಕದಲುವುದಿಲ್ಲ." [ತಿರ್ಮಿದಿ]

ಮತ್ತೊಂದು ಮಾರ್ಗ: ಅನುಗ್ರಹಗಳ ಹಕ್ಕನ್ನು ತೀರಿಸುವುದು. ಸಂಪತ್ತಿನ ಅನುಗ್ರಹವನ್ನು ಝುಕಾತ್ ಮತ್ತು ದಾನಧರ್ಮಗಳ (ಸದಖಾ) ಮೂಲಕ ಕಾಪಾಡಬೇಕು. ಅಲ್ಲಾಹನು ಹೇಳುತ್ತಾನೆ:

"ಅವರ ಸಂಪತ್ತಿನಿಂದ ದಾನವನ್ನು (ಝುಕಾತ್) ಸ್ವೀಕರಿಸಿರಿ, ಅದರ ಮೂಲಕ ಅವರನ್ನು ಪವಿತ್ರಗೊಳಿಸಿರಿ..." [ಕುರ್‌ಆನ್ - ಅತ್-ತೌಬಾ: 103]

ಪ್ರವಾದಿ ﷺ ಅವರು ತಿಳಿಸಿದ್ದಾರೆ: "ದಾನಧರ್ಮ ಮಾಡುವುದರಿಂದ ಸಂಪತ್ತು ಎಂದಿಗೂ ಕಡಿಮೆಯಾಗುವುದಿಲ್ಲ." [ತಿರ್ಮಿದಿ]. ಜ್ಞಾನವೆಂಬ ಅನುಗ್ರಹವನ್ನು ಇತರರಿಗೆ ಹಂಚುವ ಮತ್ತು ಅದರಂತೆ ಜೀವಿಸುವ ಮೂಲಕ ಕಾಪಾಡಬೇಕು. ಪ್ರವಾದಿ ﷺ ಹೇಳಿದರು: "ನನ್ನಿಂದ ಒಂದೇ ಒಂದು ವಾಕ್ಯ (ಆಯತ್) ತಿಳಿದಿದ್ದರೂ ಅದನ್ನು ಇತರರಿಗೆ ತಲುಪಿಸಿರಿ." [ಬುಖಾರಿ]. ಅಂತಸ್ತು ಮತ್ತು ಅಧಿಕಾರವೆಂಬ ಅನುಗ್ರಹವನ್ನು ಜನರ ಸಂಕಟಗಳನ್ನು ನಿವಾರಿಸುವ ಮೂಲಕ ಕಾಪಾಡಬೇಕು. ಪ್ರವಾದಿ ﷺ ಹೇಳಿದರು: "ಅಲ್ಲಾಹನಿಗೆ ಅತ್ಯಂತ ಪ್ರಿಯರಾದ ಜನರು, ಮಾನವಕುಲಕ್ಕೆ ಅತ್ಯಂತ ಉಪಕಾರಿಗಳಾದವರಾಗಿದ್ದಾರೆ." [ತಬರಾನಿ]. ಪ್ರತಿಯೊಂದು ಅನುಗ್ರಹಕ್ಕೂ ತನ್ನದೇ ಆದ ಹಕ್ಕಿದೆ; ಯಾರು ಆ ಹಕ್ಕನ್ನು ಪೂರೈಸುತ್ತಾನೋ ಅಲ್ಲಾಹನು ಆತನಿಗೆ ಆ ಅನುಗ್ರಹವನ್ನು ರಕ್ಷಿಸಿಕೊಡುತ್ತಾನೆ.

ಅಲ್ಲಾಹನು ನಮಗೂ ನಿಮಗೂ ಈ ಮಹಾನ್ ಕುರ್‌ಆನ್‌ನಲ್ಲಿ ಶುಭ ತರಲಿ, ಮತ್ತು ಇದರಲ್ಲಿರುವ ವಾಕ್ಯಗಳು ಹಾಗೂ ಉಪದೇಶಗಳಿಂದ ನಮಗೆ ಲಾಭವನ್ನು ತರಲಿ. ನಾನು ಈ ಮಾತನ್ನು ಹೇಳುತ್ತಾ, ನನಗಾಗಿ ಮತ್ತು ನಿಮಗಾಗಿ ಅಲ್ಲಾಹನಲ್ಲಿ ಕ್ಷಮೆಯಾಚಿಸುತ್ತೇನೆ. ನೀವೂ ಆತನಲ್ಲಿ ಕ್ಷಮೆಯಾಚಿಸಿ ಮತ್ತು ಆತನತ್ತ ಪಶ್ಚಾತ್ತಾಪಪಡಿ; ನಿಶ್ಚಯವಾಗಿಯೂ ಆತನು ಅತ್ಯಂತ ಕ್ಷಮಾದಾತನೂ ಕರುಣಾಮಯಿಯೂ ಆಗಿದ್ದಾನೆ.

## ಎರಡನೇ ಪ್ರವಚನ:

ಎಲ್ಲ ಪ್ರಶಂಸೆಗಳೂ ಅಲ್ಲಾಹನಿಗೆ ಮಾತ್ರ ಸಲ್ಲುತ್ತವೆ. ಆತನ ಅನುಗ್ರಹಗಳಿಗಾಗಿ ಸ್ತುತಿಗಳು, ಆತನ ಕೃಪೆಗೆ ಧನ್ಯವಾದಗಳು. ಆತನ ಸಂದೇಶ ಹಾಗೂ ಉದ್ದೇಶದ ಕಡೆಗೆ ಆಹ್ವಾನಿಸಿದ ಪ್ರವಾದಿ ಮುಹಮ್ಮದ್ ﷺ ಅವರ ಮೇಲೆಯೂ, ಅವರ ಪರಿವಾರದವರ ಹಾಗೂ ಸಹಚರರ ಮೇಲೆಯೂ ಅಂತಿಮ ದಿನದವರೆಗೆ ಅವರ ಮಾರ್ಗವನ್ನು ಅನುಸರಿಸುವ ಪ್ರತಿಯೊಬ್ಬರ ಮೇಲೆಯೂ ಶಾಂತಿ-ಸಮ್ಮಾನಗಳು ಸದಾ ಇರಲಿ.

ಓ ಅಲ್ಲಾಹನ ದಾಸರೇ, ಅಲ್ಲಾಹನಿಗೆ ಹೆದರಿ ಜೀವಿಸಿರಿ. ರಹಸ್ಯದಲ್ಲೂ ಬಹಿರಂಗದಲ್ಲೂ ಆತನನ್ನು ಸ್ಮರಿಸಿರಿ, ಮತ್ತು ನೀವೆಲ್ಲರೂ ಆತನ ಬಳಿಗೇ ಮರಳಬೇಕಾಗಿದೆ ಎಂಬುದನ್ನು ನೆನಪಿನಲ್ಲಿಡಿರಿ.

ಓ ಮುಸ್ಲಿಮರೇ: ದೇವನ ಅನುಗ್ರಹಗಳಿಗೆ ಕೃತಘ್ನರಾಗುವುದರಿಂದ ಅನುಗ್ರಹಗಳು ಕಳೆದುಹೋಗಿ ದುಃಖ-ದುಮ್ಮಾನಗಳು ಬಂದೊದಗುತ್ತವೆ. ಅಲ್ಲಾಹನು ಹೇಳುತ್ತಾನೆ:

"ಅಲ್ಲಾಹನು ಒಂದು ಉದಾಹರಣೆಯನ್ನು ನೀಡುತ್ತಾನೆ: ಒಂದು ಊರಿತ್ತು, ಅದು ಅತ್ಯಂತ ಶಾಂತಿಯುತ ಹಾಗೂ ಸುಖಮಯವಾಗಿತ್ತು. ಅದಕ್ಕೆ ಎಲ್ಲ ಕಡೆಗಳಿಂದಧಾರಾಳವಾಗಿ ಜೀವನೋಪಾಯದ ಸಾಮಗ್ರಿಗಳು ತಲುಪುತ್ತಿದ್ದವು. ಆದರೆ ಆ ಊರಿನವರು ಅಲ್ಲಾಹನ ಅನುಗ್ರಹಗಳಿಗೆ ಕೃತಘ್ನರಾದರು. ಆಗ ಅವರು ಮಾಡುತ್ತಿದ್ದ ದುಷ್ಕೃತ್ಯಗಳ ಪರಿಣಾಮವಾಗಿ ಅಲ್ಲಾಹನು ಅವರಿಗೆ ಹಸಿವು ಮತ್ತು ಭಯದ ರುಚಿಯನ್ನು ಅನುಭವಿಸುವಂತೆ ಮಾಡಿದನು." [ಕುರ್‌ಆನ್, ಅನ್ನಹ್ಲ್: 112]

ಇಲ್ಲಿ ಅಲ್ಲಾಹನು ಶಾಂತಿ ಮತ್ತು ಜೀವನೋಪಾಯವೆಂಬ ಎರಡು ಶ್ರೇಷ್ಠ ಅನುಗ್ರಹಗಳನ್ನು ಒಟ್ಟಿಗೆ ಉಲ್ಲೇಖಿಸಿ, ಕೃತಘ್ನತೆಯು ಅವುಗಳ ವಿನಾಶಕ್ಕೆ ಕಾರಣವೆಂದು ಸ್ಪಷ್ಟಪಡಿಸಿದ್ದಾನೆ. ಖಾರೂನ್ ಎಂಬವನು ತನಗೆ ಸಿಕ್ಕ ಸಂಪತ್ತಿನ ಬಗ್ಗೆ, "ಇದು ನನಗೆ ದೊರೆತದ್ದು ನನ್ನಲ್ಲಿರುವ ಮಹಾನ್ ಜ್ಞಾನದ ಬಲದಿಂದ"[ಖಸಸ್: 78] ಎಂದು ಅಹಂಕಾರಪಟ್ಟಾಗ, ಅಲ್ಲಾಹನು ಅವನನ್ನೂ ಅವನ ಭವ್ಯ ಅರಮನೆಯನ್ನೂ ಭೂಮಿಯೊಳಗೆ ಜರಿಯುವಂತೆ ಮಾಡಿದನು. ಅನುಗ್ರಹವನ್ನು ನೀಡಿದ ದೇವನನ್ನು ಮರೆತು, ಆ ಅನುಗ್ರಹದಲ್ಲೇ ಮುಳುಗಿಹೋಗುವ ಪ್ರತಿಯೊಬ್ಬರಿಗೂ ಇದೊಂದು ಸಾರ್ವಕಾಲಿಕ ಪಾಠವಾಗಿದೆ.

ಓ ಮುಸ್ಲಿಮರೇ: ನಾವು ನಮ್ಮ ಮಕ್ಕಳಿಗೆ ಮತ್ತು ನಮಗೆ ಕಲಿಸಿಕೊಡಬೇಕಾದ ಪ್ರಮುಖ ವಿಷಯವೆಂದರೆ ಅನುಗ್ರಹಗಳನ್ನು ಗೌರವಿಸುವುದು ಮತ್ತು ಅವುಗಳನ್ನು ಪೋಲು ಮಾಡದಿರುವುದು. ಆಹಾರವನ್ನು ಕಸದ ಬುಟ್ಟಿಗೆ ಎಸೆಯಬಾರದು, ನೀರು ಮತ್ತು ವಿದ್ಯುತನ್ನು ಅನಗತ್ಯವಾಗಿ ಪೋಲು ಮಾಡಬಾರದು. ಅಲ್ಲಾಹನಿಗೆ ಅಪ್ರಿಯವಾದ ವಿಷಯಗಳಲ್ಲಿ ಹಣವನ್ನು ಹಾಳುಮಾಡಬಾರದು. ಏಕೆಂದರೆ ಇವೆಲ್ಲವೂ ಅಲ್ಲಾಹನು ನಮಗೆ ನೀಡಿದ ಅಮಾನತ್ತುಗಳಾಗಿವೆ. ಪ್ರವಾದಿ ﷺ ಅವರು ಹೇಳಿದ್ದಾರೆ: "ದಾಸನು ಒಂದು ತುತ್ತು ಆಹಾರ ತಿಂದಾಗ ಅಥವಾ ಒಂದು ಗುಟುಕು ನೀರು ಕುಡಿದಾಗ ಅಲ್ಲಾಹನನ್ನು ಸ್ತುತಿಸಿದರೆ ಅಥವಾ ಅಲ್ಹಮ್ದುಲಿಲ್ಲಾಹ್ ಎಂದರೆ ಅಲ್ಲಾಹನು ಆತನ ಬಗ್ಗೆ ಅತ್ಯಂತ ಸಂತುಷ್ಟನಾಗುತ್ತಾನೆ." [ಮುಸ್ಲಿಮ್]. ಆದ್ದರಿಂದ

ನಾವು ಸದಾ ದೇವನ ಅನುಗ್ರಹಗಳಿಗೆ ಕೃತಜ್ಞತೆ ಸಲ್ಲಿಸೋಣ ಮತ್ತು ಅವುಗಳನ್ನು ಸದುಪಯೋಗಪಡಿಸಿಕೊಳ್ಳೋಣ; ಇದು ಅನುಗ್ರಹಗಳು ಶಾಶ್ವತವಾಗಿ ಉಳಿಯಲು ಮತ್ತು ಹೆಚ್ಚಾಗಲು ಕಾರಣವಾಗುತ್ತದೆ.

ಓ ಅಲ್ಲಾಹ್, ನಮ್ಮ ಮನಸ್ಸಿಗೆ ಈಮಾನ್ ಅಥವಾ ಸತ್ಯವಿಶ್ವಾಸವನ್ನು ಇಷ್ಟವಾಗಿಸು ಮತ್ತು ಅದನ್ನು ನಮ್ಮ ಹೃದಯಗಳಲ್ಲಿ ಸುಂದರಗೊಳಿಸು. ಅಧರ್ಮ, ಪಾಪ ಹಾಗೂ ಅನಾದರಗಳನ್ನು ನಮಗೆ ಅಪ್ರಿಯಗೊಳಿಸು. ನಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಯುವವರನ್ನಾಗಿ ಮಾಡು. ಇಸ್ಲಾಂ ಮತ್ತು ಮುಸ್ಲಿಮರಿಗೆ ಘನತೆಯನ್ನು ತಂದುಕೊಡು. ಓ ಅಲ್ಲಾಹ್, ಕುವೈತ್ ದೇಶವನ್ನು ಮತ್ತು ಅದರ ಜನರನ್ನು ಎಲ್ಲ ಕೆಡುಕುಗಳಿಂದ ಕಾಯ್ದಿರಿಸು. ಈ ದೇಶವನ್ನು ಮತ್ತು ಇತರ ಎಲ್ಲ ಮುಸ್ಲಿಂ ದೇಶಗಳನ್ನು ಶಾಂತಿ-ನೆಮ್ಮದಿಯ ಧಾಮವನ್ನಾಗಿ ಮಾಡು. ನಮ್ಮ ಗಡಿ ಕಾಯುವ ಸೈನಿಕರನ್ನು ಮತ್ತು ದೇಶದ ಸುರಕ್ಷತೆಗೆ ಶ್ರಮಿಸುವವರನ್ನು ರಕ್ಷಿಸು. ನಮ್ಮ ಆಡಳಿತಗಾರರಿಗೆ ಮತ್ತು ಅವರ ಉತ್ತರಾಧಿಕಾರಿಗಳಿಗೆ ನಿನ್ನ ಮೆಚ್ಚುಗೆಯ ದಾರಿಯಲ್ಲಿ ನಡೆಯಲು ತೌಫೀಕ್ ನೀಡು. ನಮ್ಮ ಕೊನೆಯ ಪ್ರಾರ್ಥನೆ: ಎಲ್ಲ ಪ್ರಶಂಸೆಗಳೂ ಸರ್ವಲೋಕಗಳ ಒಡೆಯನಾದ ಅಲ್ಲಾಹನಿಗೆ ಮಾತ್ರ ಸಲ್ಲಿಕೆ.